# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ., ಬಾಗಲಕೋಟೆ




## 23rd Annual Report & Balance Sheet 2024-2025

## 23ನೇ ವಾರ್ಷಿಕ ವರದಿ ಹಾಗೂ ಆಢಾವೆ ಪತ್ರಿಕೆ 2024-2025

Reg. No. CRD/32208 Date:1.2.2003 | RBI Licence No. RCCD (BG) DCCB 28/2011-12 Dt. 15.12.2011

# THE BAGALKOTE D.C.C. BANK LTD., BAGALKOTE



ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ
ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103



# 23ನೇ ವರ್ಷದ ಸರ್ವ ಸಾಧಾರಣ ಸಭೆಯ

## ಆಹ್ವಾನ ಪತ್ರಿಕೆ

ಬ್ಯಾಂಕಿನ 2024-25 ನೇ ಸಾಲಿನ ಸರ್ವ ಸಾಧಾರಣ ಸಭೆಯನ್ನು

**ದಿನಾಂಕ: 26.07.2025 ರಂದು ಮುಂಜಾನೆ 11.00 ಘಂಟೆಗೆ**
**ನವನಗರದ ಕಲಾ ಭವನ, ಸೆಕ್ಟರ್ ನಂ. 19, ಬಾಗಲಕೋಟೆಯಲ್ಲಿ**

ಬ್ಯಾಂಕಿನ ಅಧ್ಯಕ್ಷರಾದ

**ಶ್ರೀ ಅಜಯಕುಮಾರ ಸರನಾಯಕ**

ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

**ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಆಗಮಿಸಬೇಕಾಗಿ ಕೋರಿದೆ.**

ಸ್ಥಳ : ಬಾಗಲಕೋಟೆ
ದಿನಾಂಕ : 05.07.2025

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ವಿಶೇಷ ಸೂಚನೆ: ಬ್ಯಾಂಕಿನ ಮಹಾ ಸಭೆಗೆ ಹಾಜರಾಗಲು ಸದಸ್ಯತ್ವ ಹೊಂದಿದ
ಸಹಕಾರ ಸಂಘದ ಒಬ್ಬ ಪ್ರತಿನಿಧಿಗೆ ಮಾತ್ರ ಅವಕಾಶವಿರುತ್ತದೆ.

# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ

ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103

## ದೂರವಾಣಿ ಸಂಖ್ಯೆಗಳು

ಅಧ್ಯಕ್ಷರು: (08354) -235573 ಮುಖ್ಯ ಕಾರ್ಯನಿರ್ವಹಣಾಧಿಕಾರಿ: (08354) 235572

### ಕೇಂದ್ರ ಕಛೇರಿ

ಆಡಳಿತ ವಿಭಾಗ: (08354) 236443 ಫ್ಯಾಕ್ಸ್ ನಂ: (08354) 235571

**E-mail: ho@bagalkotdccbank.com**

| ಅನಂ | ಶಾಖೆಯ ಹೆಸರು | ದೂರವಾಣಿ ಸಂಖ್ಯೆ | ಅನಂ | ಶಾಖೆಯ ಹೆಸರು | ದೂರವಾಣಿ ಸಂಖ್ಯೆ |
|---|---|---|---|---|---|
| ಬಾಗಲಕೋಟೆ ತಾಲೂಕಾ | | | ಜಮಖಂಡಿ ತಾಲೂಕಾ | | |
| 1 | ಬಾಗಲಕೋಟೆ | 6366568612 | 30 | ಜಮಖಂಡಿ | 6366568620 |
| 2 | ಕಲಾದಗಿ | 6366568685 | 31 | ಬಜಾರ ಶಾಖೆ ಜಮಖಂಡಿ | 6366568621 |
| 3 | ರಾಂಪೂರ | 6366568614 | 32 | ಸಾವಳಗಿ | 6366568699 |
| 4 | ಶಿರೂರ ವಿ. ಕೌ | 6366568695 | 33 | ತೊದಲಬಾಗಿ | 6366568706 |
| 5 | ನವನಗರ ಬಾಗಲಕೋಟ | 6366568628 | 34 | ಹುನ್ನೂರ | 6366979359 |
| 6 | ಗದ್ದನಕೇರಿ ಕ್ರಾಸ್ | 6366568655 | 35 | ಕೊಣ್ಣೂರ | 6366979365 |
| 7 | ನಾಯನೇಗಲಿ | 6366568714 | ರಬಕವಿ–ಬನಹಟ್ಟಿ ತಾಲೂಕಾ | | |
| 8 | ಭಗವತಿ | 6366568643 | 36 | ತೇರದಾಳ | 6366568641 |
| 9 | ನವನಗರ ಸೆಕ್ಟರ ನಂ:52/53 | 6366979355 | 37 | ಬನಹಟ್ಟಿ | 6366568615 |
| 10 | ವಿದ್ಯಾಗಿರಿ ಬಾಗಲಕೋಟೆ | 6366979362 | 38 | ರಬಕವಿ | 6366568661 |
| | | | 39 | ಹಿಪ್ಪರಗಿ | 6366568703 |
| ಬಾದಾಮಿ ತಾಲೂಕಾ | | | 40 | ಮಹಾಲಿಂಗಪೂರ | 6366568629 |
| 11 | ಬಾದಾಮಿ | 6366568613 | | | |
| 12 | ಗುಳೇದಗುಡ್ಡ | 6366568668 | ಮುಧೋಳ ತಾಲೂಕಾ | | |
| 13 | ಕೆರೂರ | 6366568633 | 41 | ಮುಧೋಳ | 6366568638 |
| 14 | ಕುಳಗೇರಿ ಕ್ರಾಸ್ | 6366568631 | 42 | ಲೋಕಾಪೂರ | 6366568665 |
| 15 | ಕಟಗೇರಿ ವಿ. ಕೌ. | 6366568651 | 43 | ಹಲಗಲಿ | 6366568691 |
| 16 | ನೀರಬೂದಿಹಾಳ | 6366568708 | 44 | ಚಿಂಚಖಂಡಿ ಕೆ.ಡಿ. ವಿ. ಕೌ | 6366568705 |
| 17 | ಬೇಲೂರ | 6366568645 | 45 | ರನ್ನನಗರ | 6366559571 |
| 18 | ನಂದಿಕೇಶ್ವರ | 6366568660 | 46 | ನಾಗರಾಳ | 6366568698 |
| 19 | ಬದಾಮಿ (ರೇಲ್ವೆ ಸ್ಟೇಶನ ರಸ್ತೆ) | 6366979356 | 47 | ಮಂಟೂರ | 6366568636 |
| 20 | ನೀಲಗುಂದ | 6366979363 | 48 | ಜಮಖಂಡಿ ರಸ್ತೆ ಮುಧೋಳ | 6366979358 |
| ಹುನಗುಂದ ತಾಲೂಕಾ | | | 49 | ಮೆಟಗುಡ್ಡ | 6366979357 |
| 21 | ಹುನಗುಂದ | 6366568683 | 50 | ಬರಗಿ | 6366568646 |
| 22 | ಅಮೀನಗಡ | 6366568664 | ಬೀಳಗಿ ತಾಲೂಕಾ | | |
| 23 | ಸಂಗಮ | 6366568642 | 51 | ಬೀಳಗಿ | 6366568647 |
| 24 | ಕಮತಗಿ | 6366568670 | 52 | ಗಲಗಲಿ | 6366568696 |
| 25 | ಧನ್ನೂರ | 6366568710 | 53 | ಕುಂದರಗಿ | 6366568681 |
| ಇಲಕಲ್ ತಾಲೂಕಾ | | | 54 | ಗಿರಿಸಾಗರ | 6366568658 |
| 26 | ಇಲಕಲ್ | 6366568654 | 55 | ಬಾಡಗಂಡಿ | 6366568657 |
| 27 | ಕರಡಿ | 6366559572 | 56 | ಅನಗವಾಡಿ | 6366979361 |
| 28 | ಗುಡೂರ | 6366568724 | 57 | ತೆಗ್ಗಿ | 6366979364 |
| 29 | ನಂದವಾಡಗಿ | 6366568604 | | | |

ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ
ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103

# ಅಧ್ಯಕ್ಷರ ಸಂದೇಶ



ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ 2024–25 ನೇ ಸಾಲಿನ 23 ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಗೆ ಆಡಳಿತ ಮಂಡಳಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಎಲ್ಲ ಸದಸ್ಯರನ್ನು ಗೌರವಪೂರ್ವಕವಾಗಿ ಸ್ವಾಗತಿಸುತ್ತೇನೆ.

ನಿಸ್ವಾರ್ಥ, ಪ್ರಾಮಾಣಿಕ ಹಾಗೂ ದಕ್ಷ ಸಹಕಾರಿಗಳ ಮಾರ್ಗದರ್ಶನದಲ್ಲಿ ದಿನಾಂಕ: 01–03–2003 ರಂದು ಸ್ಥಾಪಿತವಾದ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು, ನೀತಿ ನಿಯಮಗಳನ್ನು ತನ್ನ ಆಡಳಿತ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ಕಾಲ ಕಾಲಕ್ಕೆ ಬದಲಾವಣೆಗಳನ್ನು ರೂಡಿಸಿಕೊಳ್ಳುತ್ತಾ ರಾಜ್ಯದಲ್ಲಿಯೇ ಪ್ರತಿಷ್ಠಿತ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಾಗಿ ಹೊರಹೊಮ್ಮಿದೆ. ಎಲ್ಲ ವರ್ಗದ ಸಹಕಾರಿ ಬಂಧುಗಳ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ನೆರವು ನೀಡುವ ಉದ್ದೇಶದೊಂದಿಗೆ ಸ್ಥಾಪಿತಗೊಂಡು ಹಲವು ಕಠಿಣ ಸಂದರ್ಭಗಳನ್ನು ಎದುರಿಸಿ ತನ್ನದೆ ಆದ ಕಾರ್ಯವೈಖರಿ ಮೂಲಕ ಉತ್ತಮ ಆಡಳಿತ ಮಂಡಳಿ ಮಾರ್ಗದರ್ಶನದಲ್ಲಿ ಎಲ್ಲ ವಲಯದ ಆರ್ಥಿಕ ಸಂಸ್ಥೆಗಳಿಗೆ ಪೈಪೋಟಿ ನೀಡುತ್ತಾ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ.

ಸನ್ 2003 ರಲ್ಲಿ ರೂ. 449.15 ಕೋಟಿ ವ್ಯವಹಾರದೊಂದಿಗೆ ಪ್ರಾರಂಭವಾದ ಬಾಗಲಕೋಟೆ ಡಿಸಿಸಿ ಬ್ಯಾಂಕ ಸನ್ 2025 ಕ್ಕೆ ರೂ. 7487.56 ಕೋಟಿ ವ್ಯವಹಾರ ಹೊಂದಿದೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ. ಸನ್ 2024–25 ನೇ ಬ್ಯಾಂಕಿನ ಲೆಕ್ಕ ಪರಿಶೋಧಿತ ಹಣಕಾಸಿನ ತಃಖ್ತೆಗಳನ್ನು ಹಾಗೂ ಬ್ಯಾಂಕಿನ ನಿರ್ದೇಶಕ ಮಂಡಳಿಯ ವರದಿಯನ್ನು ತಮ್ಮ ಮುಂದೆ ಸಾದರಪಡಿಸಲು ನನಗೆ ಹೆಮ್ಮೆ ಎನಿಸುವದು. ಬ್ಯಾಂಕು ಪ್ರಸಕ್ತ ಆರ್ಥಿಕ ವರ್ಷದಲ್ಲಿ ರೂ. 54.39 ಕೋಟಿಯಷ್ಟು ಒಟ್ಟು ಲಾಭ ಗಳಿಸಿ (Gross Profit) ಅವಶ್ಯಕ ಅನುವು ಕಲ್ಪಿಸಿದ ನಂತರ ರೂ. 7.61 ಕೋಟಿ ನಿವ್ವಳ ಲಾಭ ಗಳಿಸಿದೆ. ವರದಿ ವರ್ಷಾಂತ್ಯಕ್ಕೆ ಬ್ಯಾಂಕಿನ ಸ್ವಂತ ಬಂಡವಾಳ ರೂ. 612.28 ಕೋಟಿ, ಒಟ್ಟು ಠೇವಣಿ ರೂ. 3857.04 ಕೋಟಿ ಹಾಗೂ ಬ್ಯಾಂಕಿನ ದುಡಿಯುವ ಬಂಡವಾಳ ರೂ. 5705.26 ಕೋಟಿಯಾಗಿದ್ದು, ಈ ವರ್ಷ ಒಟ್ಟು ರೂ. 2853.62 ಕೋಟಿಯಷ್ಟು ಸಾಲ ವಿತರಣೆ ಮಾಡಿದೆ.

ರೂ. 1376.26 ಕೋಟಿಯಷ್ಟು ಸರ್ಕಾರ ಹಾಗೂ ಸೂಚಿತ ಸಂಸ್ಥೆಗಳಲ್ಲಿ ವಿವೇಕಯುಕ್ತವಾಗಿ ವಿನಿಯೋಗಿಸಲಾಗಿದ್ದು ರಿಜರ್ವ ಬ್ಯಾಂಕಿನ ನಿಯಮದಂತೆ ನಿಗಧಿಪಡಿಸಿದ ಸಿ.ಆರ್.ಆರ್ ಹಾಗೂ ಎಸ್.ಎಲ್.ಆರ್. ನ್ನು ನಿರ್ವಹಿಸಲಾಗಿರುತ್ತದೆ.

ಸನ್ 2024–25 ನೇ ಸಾಲಿನಲ್ಲಿ ಬ್ಯಾಂಕು ತನ್ನ ಗೊತ್ತುಪಡಿಸಿದ ಅಭಿವೃದ್ಧಿ ಕ್ರಿಯಾ ಯೋಜನೆಯನ್ವಯ ಕ್ರಮವಿಟ್ಟು ಸಂಪನ್ಮೂಲಗಳ ಸಂಗ್ರಹಣೆ, ಠೇವಣಾತಿ ಸಂಗ್ರಹಣೆಯಲ್ಲಿ ಹೆಚ್ಚಳ ಸಾಧಿಸಿ, ಕೃಷಿಗೆ (ಅನ್ನದಾತರಿಗೆ) ಮೊದಲು ಆದ್ಯತೆ ನೀಡುವುದರ ಜೊತೆಗೆ ಕೃಷಿಯೇತರ ಚಟುವಟಿಕೆಗಳಿಗಾಗಿ ವಿವಿಧ ರೀತಿಯ ಆರ್ಥಿಕ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗತ ಸಹ ಸದಸ್ಯರಿಗೂ ವಿವಿಧ ಉದ್ದೇಶಗಳಿಗಾಗಿ ಸಾಲ ನೀಡುತ್ತಲಿದೆ.

ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ 256447 ರೈತರಿಗೆ ಶೂನ್ಯ ಬಡ್ಡಿದರದಲ್ಲಿ ರೂ. 1375.05 ಕೋಟಿಯಷ್ಟು ಬೆಳೆಸಾಲ ಮತ್ತು ಶೇ. 3.00 ರ ಬಡ್ಡಿದರದಲ್ಲಿ ರೂ. 65.80 ಕೋಟಿ ಮಾಧ್ಯಮಿಕ (ಕೃಷಿ) ಸಾಲ ನೀಡಿದ್ದು ಅಲ್ಲದೇ ನೇಕಾರರಿಗೆ, ಮೀನುಗಾರರಿಗೆ, ಹೈನುಗಾರಿಕೆಗೆ ಮತ್ತು ಸ್ವ–ಸಹಾಯ ಗುಂಪುಗಳಿಗೆ ಸಾಲ ನೀಡುವ ಕರ್ನಾಟಕ ರಾಜ್ಯ ಸರಕಾರದ ಪ್ರಮುಖ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ.

ವ್ಯಕ್ತಿಗತ ಕೃಷಿಯೇತರ ಸಾಲವನ್ನು ಉತ್ತೇಜಿಸಲು ಮತ್ತು ಜಿಲ್ಲೆಯಲ್ಲಿರುವ ಇತರೇ ಬ್ಯಾಂಕುಗಳೊಂದಿಗೆ ಸ್ಪರ್ಧಾತ್ಮಕ ಪೈಪೋಟಿ

ನೀಡುವ ಉದ್ದೇಶದಿಂದ ವಿಶೇಷ ಯೋಜನೆಯಡಿ ನಿರ್ಧಿಷ್ಟ ಅವಧಿಗೆ ಸಿಮೀತಗೊಳಿಸಿ ನವ್ವಂಬರ–2024 ತಿಂಗಳಲ್ಲಿ ವಿಶೇಷ ಬಡ್ಡಿ ದರ ಪ್ರತಿಶತ 9.50% ರಲ್ಲಿ "ವಾಹನ ಸಾಲ ಮೇಳ" ಸಾಲವನ್ನು ಹಮ್ಮಿಕೊಳ್ಳಲಾಗಿತ್ತು. ಈ ಯೋಜನೆಯಡಿ ಒಟ್ಟು 824 ಅರ್ಹ ಸಾಲಗಾರರಿಗೆ ರೂ: 20.85 ಕೋಟಿಯಷ್ಟು ಸಾಲವನ್ನು ನೀಡಲಾಗಿದ್ದು ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೇ ವ್ಯಕ್ತವಾಗಿರುತ್ತದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯ ರೈತರಿಗೆ ಇರುವ ವೈಯಕ್ತಿಕ ಅಪಘಾತ ವಿಮಾ ಯೋಜನೆಯಡಿ ಇಲ್ಲಿಯವರೆಗೆ 484 ರೈತ ಸದಸ್ಯರು ಫಲಾನುಭವಿಗಳಾಗಿದ್ದು ರೂ. 2.67 ಕೋಟಿ ವಿಮೆ ಪರಿಹಾರ ಪಡೆದುಕೊಂಡಿರುತ್ತಾರೆ. ಅಲ್ಲದೆ ರೈತರು ಬೆಳೆಯುವ ಬೆಳೆಗೆ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಮತ್ತು ಹವಾಮಾನಾಧರಿತ ಬೆಳೆ ವಿಮಾ ಯೋಜನೆ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬ್ಯಾಂಕು ಅಳವಡಸಿಕೊಂಡಿದ್ದು ಗ್ರಾಹಕರಿಗೆ ಅತ್ಯಾಧುನಿಕ ಸೇವೆಗಳನ್ನು ಒದಗಿಸುತ್ತಿದೆ.

- **ಇಲ್ಲಿಯವರೆಗೆ 40 ATM ಗಳನ್ನು ಅಳವಡಿಸಲಾಗಿದೆ. 150 PACS ಗಳಿಗೆ Micro ATM ನೀಡಲಾಗಿದೆ ಇನ್ನೂ 114 Micro ATM ವಿತರಿಸುವ ಗುರಿ ಹೊಂದಲಾಗಿದೆ.**
- **ವರದಿ ವರ್ಷದಲ್ಲಿ PPS, Mobile Banking ಸೇವೆಗಳನ್ನು ಅಳವಡಿಸಿಕೊಳ್ಳಲಾಗಿದ್ದು, ಮುಂಬರುವ ವರ್ಷದಲ್ಲಿ BBPS (Bharat Bill Payment System), IMPS ಮತ್ತು UPI ಹೊಂದುವ ಗುರಿ ಹೊಂದಲಾಗಿದೆ.**
- **ಬ್ಯಾಂಕು ವಿಮಾ ವ್ಯವಹಾರ ಕೈಗೊಳ್ಳಲು IRDA ದಿಂದ Corporate Agent ಪರವಾಣಿಗೆಯನ್ನು ಪಡೆದುಕೊಂಡಿದ್ದು ಗ್ರಾಹಕರಿಗೆ ವಿಮಾ ಸೌಲಭ್ಯಗಳನ್ನು ಪೈಪೋಟಿ ದರದಲ್ಲಿ ನೀಡುವುದರೊಂದಿಗೆ ಬ್ಯಾಂಕಿನ ಬಂಡವಾಳ ರಹಿತ ಆದಾಯ ಹೆಚ್ಚಿಸಲಾಗಿದೆ.**
- **"ನಬಾರ್ಡ"ನ PACS as MSC ಯೋಜನೆಯಡಿ 72 ಸಂಘಗಳಿಗೆ ಮೂಲಭೂತ ಸೌಕರ್ಯ, ವ್ಯಾಪಾರ ಮಳಿಗೆ ಮತ್ತು ಕೃಷಿ ಸಲಕರಣೆಗಳಿಗೆ ರೂ. 29.30 ಕೋಟಿಯಷ್ಟು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಮಂಜೂರ ಮಾಡಿದ್ದು ಆ ಪೈಕಿ 62 ಸಂಘಗಳಿಗೆ ರೂ. 20.17 ಕೋಟಿಯಷ್ಟು ಸಾಲ ವಿತರಿಸಲಾಗಿದೆ.**
- **ಬ್ಯಾಂಕಿನ ಒಟ್ಟು 57 ಶಾಖೆಗಳ ಪೈಕಿ ಪ್ರಸ್ತುತವಾಗಿ 9 ಶಾಖೆಗಳು ಸ್ವಂತ ಕಟ್ಟಡ ಹೊಂದಿದ್ದು ಇನ್ನೂ 4 ಶಾಖೆಗಳ ಕಟ್ಟಡ ಕಾಮಗಾರಿ ಕಾರ್ಯ ಪ್ರಗತಿಯಲ್ಲಿರುತ್ತದೆ ಅದರಂತೆ 7 ಶಾಖೆಗಳಿಗೆ ಸ್ವಂತ ನಿವೇಶನಗಳನ್ನು ಹೊಂದಿದ್ದು ಮುಂಬರುವ ವರ್ಷದಲ್ಲಿ 3 ಶಾಖೆಗಳ ಕಟ್ಟಡ ಕಾಮಗಾರಿ ಪ್ರಾರಂಭಿಸುವ ಗುರಿ ಹೊಂದಿದೆ.**
- **ಬ್ಯಾಂಕು ಆರಂಭದಿಂದಲೂ ಲಾಭದಲ್ಲಿ ಕಾರ್ಯನಿರ್ವಹಿಸುತ್ತಲಿದೆ. ಅದರಂತೆ ಪ್ರತಿ ವರ್ಷದಂತೆ ಸನ್ 2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಂತೆ "A" ಶ್ರೇಣಿ ಲಭಿಸಿರುತ್ತದೆ.**
- **ಬ್ಯಾಂಕು ತನ್ನ ವ್ಯವಹಾರಿಕ ಯಾವುದೇ ಲಾಭಾಂಶದ ಮಾರ್ಜಿನನ್ನು ಪರಿಗಣಿಸದೇ ಜಿಲ್ಲೆಯ ರೈತರ ಆರ್ಥಿಕ ಅಭಿವೃದ್ಧಿಗೋಸ್ಕರ ಬೆಳೆಸಾಲದೊಂದಿಗೆ ವಿವಿಧ ಕೃಷಿಚಟುವಟಿಕೆಗಳಿಗೆ ಮಾಧ್ಯಮಿಕ ಕೃಷಿ ಸಾಲ ನೀಡುತ್ತಲಿದ್ದು ಈ ದಿಶೆಯಲ್ಲಿ ನಮ್ಮ ಬ್ಯಾಂಕು ಕೃಷಿ ಸಾಲ ನೀಡುವಲ್ಲಿ ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಕೇಂದ್ರ ಬ್ಯಾಂಕುಗಳಲ್ಲಿಯೇ ಅಗ್ರಸ್ಥಾನದಲ್ಲಿರುತ್ತದೆ.**
- **ಬಾಂಕು ಮಹಿಳಾ ಸಬಲೀಕರಣಕ್ಕಾಗಿ ಪ್ರಸಕ್ತ ವರ್ಷದಲ್ಲಿ ಜಿಲ್ಲೆಯ ಸ್ವ–ಸಹಾಯ ಗುಂಪುಗಳಿಗೆ 100 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ 1327 ಗುಂಪುಗಳಿಗೆ ರೂ. 15.53 ಕೋಟಿ ಸಾಲ ನೀಡುವ ಗುರಿ ಹೊಂದಲಾಗಿದೆ.**

ಬ್ಯಾಂಕಿಗೆ ನಿರಂತರವಾಗಿ ಸಹಕಾರ ಹಾಗೂ ಕಾಲ ಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಮಾನ್ಯ ಕರ್ನಾಟಕ ರಾಜ್ಯ ಘನ ಸರ್ಕಾರಕ್ಕೂ ಹಾಗೂ ಬ್ಯಾಂಕಿನ ಕಾರ್ಯ ಪ್ರಗತಿಯಲ್ಲಿ ಸಹಕರಿಸುತ್ತಿರುವ ಜಿಲ್ಲೆಯ ಲೋಕಸಭೆ, ವಿಧಾನ ಸಭೆ, ವಿಧಾನ ಪರಿಷತ್ ಸದಸ್ಯರುಗಳಿಗೂ, ಜಿಲ್ಲಾಡಳಿತಕ್ಕೂ, ಜಿಲ್ಲಾ ಪೋಲೀಸ್ ಇಲಾಖೆಗೆ ಅದರಂತೆ ಬ್ಯಾಂಕಿಗೆ ಪ್ರೋತ್ಸಾಹ ನೀಡಿದ ಎಲ್ಲ ಗ್ರಾಹಕರಿಗೂ ಬ್ಯಾಂಕು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಅದೇ ರೀತಿ ಬ್ಯಾಂಕಿಗೆ ಆರ್ಥಿಕ ನೆರವು ಮತ್ತು ಕಾಲಕಾಲಕ್ಕೆ ಮಾರ್ಗದರ್ಶನ ನೀಡಿದ್ದಕ್ಕಾಗಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ, ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ, ಸಹಕಾರ ಇಲಾಖಾ ಅಧಿಕಾರಿಗಳಿಗೆ, ಲೆಕ್ಕ ಪರಿಶೋಧನಾ ಇಲಾಖಾಧಿಕಾರಿಗಳಿಗೆ, ಬ್ಯಾಂಕಿನ ಶಾಸನ ಬದ್ಧ ಲೆಕ್ಕ ಪರಿಶೋಧಕರಿಗೆ, ಆದಾಯ ಕರ ಕುರಿತಂತೆ ಸಲಹೆ ಸೂಚನೆ ನೀಡಿದ ಚಾರ್ಟರ್ಡ್ ಅಕೌಂಟಂಟರುಗಳಿಗೆ, ಜಿಲ್ಲೆಯ ಎಲ್ಲ ಸದಸ್ಯ ಸಂಘ ಸಂಸ್ಥೆಗಳಿಗೂ ಹಾಗೂ ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಕಾರಣೀಭೂತರಾದ ಎಲ್ಲ ಅಭಿಮಾನಿ ಗ್ರಾಹಕರಿಗೂ ಹಾಗೆಯೇ ಬ್ಯಾಂಕಿನ ಪ್ರಗತಿಯ ಕುರಿತು ಕಾಲ ಕಾಲಕ್ಕೆ ಸುದ್ದಿ ಮಾಧ್ಯಮದಲ್ಲಿ ಪ್ರಸಾರ ಮಾಡಿದ ಮಾಧ್ಯಮ ವರ್ಗದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ, ಬ್ಯಾಂಕಿನ ಎಲ್ಲ ಸಿಬ್ಬಂದಿಯವರು ಪರಿಶ್ರಮ ಪಟ್ಟು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವದನ್ನು ಸಹ ಬ್ಯಾಂಕು ಸ್ಮರಿಸುತ್ತದೆ.

**ಜೈ ಹಿಂದ, ಜೈ ಸಹಕಾರ**

ಸಹಿ/-
**(ಅಜಯಕುಮಾರ ಸರನಾಯಕ)**
ಅಧ್ಯಕ್ಷರು.

# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ

ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103

## ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು



**ಶ್ರೀ ಅಜಯಕುಮಾರ ಎಸ್. ಸರನಾಯಕ**
ಅಧ್ಯಕ್ಷರು



**ಶ್ರೀ ಮುರುಗೇಶ ಈ. ಕಡ್ಲಿಮಟ್ಟಿ**
ಉಪಾಧ್ಯಕ್ಷರು



**ಶ್ರೀ ಸಿದ್ದಪ್ಪ ಕ. ಸವದಿ**
ಶಾಸಕರು
ನಿರ್ದೇಶಕರು




**ಶ್ರೀ ಎಚ್.ವೈ.ಮೇಟಿ**
ಶಾಸಕರು
ನಿರ್ದೇಶಕರು



**ಡಾ. ವಿಜಯಾನಂದ ಎಸ್. ಕಾಶಪ್ಪನವರ**
ಶಾಸಕರು
ನಿರ್ದೇಶಕರು



**ಶ್ರೀ ಎಚ್. ಆರ್. ನಿರಾಣಿ** ಎಂ.ಎಲ್.ಸಿ
ನಿರ್ದೇಶಕರು



**ಶ್ರೀ ಶಿವನಗೌಡ ಆರ್. ಪಾಟೀಲ**
ಮಾಜಿ ಸಚಿವರು
ನಿರ್ದೇಶಕರು



**ಶ್ರೀ ಆನಂದ ಎಸ್. ನ್ಯಾಮಗೌಡ**
ಮಾಜಿ ಶಾಸಕರು
ನಿರ್ದೇಶಕರು



**ಶ್ರೀ ರಾಮಪ್ಪ ಎಸ್. ತಳೇವಾಡ**
ನಿರ್ದೇಶಕರು



**ಶ್ರೀ ಕುಮಾರಗೌಡ ಬಿ. ಜನಾಲಿ**
ನಿರ್ದೇಶಕರು



**ಶ್ರೀ ಪ್ರಕಾಶ ಈ. ತಪಶೆಟ್ಟಿ**
ನಿರ್ದೇಶಕರು



**ಶ್ರೀ ಶಿವನಗೌಡ ಎಸ್. ಅಗಸಿಮುಂದಿನ**
ನಿರ್ದೇಶಕರು



**ಶ್ರೀ ಏಗಪ್ಪ ಕ. ಸವದಿ**
ನಿರ್ದೇಶಕರು



**ಶ್ರೀ ಬಸವರಾಜ ಎಂ. ಪಾಟೀಲ**
ಅಪೆಕ್ಸ್ ಬ್ಯಾಂಕ್ ನಾಮ ನಿರ್ದೇಶಿತ ಸದಸ್ಯರು,
ನಿರ್ದೇಶಕರು



**ಶ್ರೀ ಪಡಿಯಪ್ಪ ಡಿ. ಜತ್ತಿ**
ವೃತ್ತಿಪರ ನಿರ್ದೇಶಕರು



**ಶ್ರೀ ಕುಮಾರ ಎಸ್. ಜಿಗಜಿನ್ನಿ**
ವೃತ್ತಿಪರ ನಿರ್ದೇಶಕರು



**ಶ್ರೀ ಎಸ್.ಎನ್.ನೀಲಪ್ಪನ್ನವರ** KCS
ಸಹಕಾರ ಸಂಘಗಳ ಅಪರ ನಿಭಂದಕರು
ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ



**ಶ್ರೀ ದಾನಯ್ಯ ಎಸ್.ಹಿರೇಮಠ**
ಉಪ ನಿಭಂದಕರು,
ಸಹಕಾರ ಸಂಘಗಳು, ಬಾಗಲಕೋಟೆ



ಹುನಗುಂದ ಶಾಖೆ ಕಟ್ಟಡ ನಿರ್ಮಾಣದ ಭೂಮಿ ಪೂಜೆಯಲ್ಲಿ ಉಪಸ್ಥಿತರಿದ್ದ ಬ್ಯಾಂಕಿನ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಗಳು.



ರಾಂಪೂರ ಶಾಖೆ ಹೊಸ ಕಟ್ಟಡ ಪ್ರಾರಂಭೋತ್ಸವದಲ್ಲಿ ಉಪಸ್ಥಿತರಿದ್ದ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಗಳು.

# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ

ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103




**PACS as MSC** "ನಬಾರ್ಡ" ಸಾಲ ಯೋಜನೆಯಲ್ಲಿ
ನಿರ್ಮಿಸಲಾದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.,
ನಂದಿಕೇಶ್ವರ ಈ ಸಂಘದ ಕಟ್ಟಡ.



ರನ್ನನಗರ ಶಾಖೆ ಹೊಸ ಕಟ್ಟಡ ಉದ್ಘಾಟನೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ
ಬ್ಯಾಂಕಿನ ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಸಿಬ್ಬಂದಿಗಳು.



**PMSBY** ಯೋಜನೆಯಡಿ ಅಪಘಾತದಲ್ಲಿ ಮರಣ ಹೊಂದಿದ ಪಿಕೆಪಿಎಸ್ ಜಗದಾಳ
ಈ ಸಂಘದ ಸದಸ್ಯರ ಸಂಬಂಧಿಗಳಿಗೆ ಬ್ಯಾಂಕಿನ ನಿರ್ದೇಶಕರು
ಪರಿಹಾರದ ಚಕ್ಕನ್ನು ನೀಡುತ್ತಿರುವದು.



“ವೀರರಾಣಿ ಚನ್ನಮ್ಮ ರೈತ ಉತ್ಪಾದಕ ಸಂಘ ಸಸಾಲಟ್ಟಿ” ಇವರು
ಶೈಕ್ಷಣಿಕ ಪ್ರವಾಸ ನಿಮಿತ್ತ ಶ್ರೀ ವೀರಭದ್ರೇಶ್ವರ ರೈತ ಉತ್ಪಾದಕರ
ಸಂಘಕ್ಕೆ ಭೇಟಿ ನೀಡಿದ ಸಂದರ್ಭ.

# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ

ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103




ಬ್ಯಾಂಕಿನಿಂದ ಕಟ್ಟಡ ಸಹಾಯಧನ ಯೋಜನೆಯಡಿಯಲ್ಲಿ ನಿರ್ಮಾಣಗೊಂಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ನಾಗನೂರ ತಾ: ಜಮಖಂಡಿ ಇದರ ಕಟ್ಟಡ



ಕೆರೂರ ಶಾಖೆಯ ಕಟ್ಟಡ ಭೂಮಿ ಪೂಜಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಬ್ಯಾಂಕಿನ ಅಧ್ಯಕ್ಷರು, ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿಗಳು.



ಮಾನ್ಯ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ
ಕ್ರೀಡಾಪಟುವಿಗೆ ಬ್ಯಾಂಕಿನ ಕ್ರೀಡಾ ಪ್ರೋತ್ಸಾಹ ನಿಧಿಯಿಂದ
ಸೈಕಲ್ ವಿತರಣೆ ಮಾಡಿದ ಸಂದರ್ಭ.




ಕಮತಗಿ ಶಾಖೆಯ ಎಟಿಎಂ ಉದ್ಘಾಟನಾ ಕಾರ್ಯಕ್ರಮದಲ್ಲಿ ಬ್ಯಾಂಕಿನ ಅಧ್ಯಕ್ಷರು,
ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಸಿಬ್ಬಂದಿಗಳು ಉಪಸ್ಥಿತರಿರುವರು.




ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಸಿಬ್ಬಂದಿಗಳು ಭಾಗವಹಿಸಿದ ಸಂದರ್ಭ.



ಬ್ಯಾಂಕಿನಿಂದ ಕ್ರೀಡಾಪಟುವಿಗೆ ಮಾನ್ಯ ಅಧ್ಯಕ್ಷರಿಂದ
ಸೈಕಲ್ ವಿತರಣೆ ಮಾಡಿದ ಸಂದರ್ಭ.


BDCC BANK
ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬಾಗಲಕೋಟೆ
ವಾಹನ ಸಾಲ ಮೇಳ
ಬಡ್ಡಿದರ 9.50%
ಹೆಚ್ಚಿನ ಮಾಹಿತಿಗಾಗಿ ಸಮೀಪದ ಶಾಖೆಗಳಿಗೆ ಸಂಪರ್ಕಿಸಿರಿ.
ಪ್ರತಿಶತ 90% ರಷ್ಟು ಸಾಲ ಮಂಜೂರಾತಿ
ಶೀಘ್ರ ಮಂಜೂರಾತಿ
ಪೂರ್ವ ಪಾವತಿ ಶುಲ್ಕಗಳಿಲ್ಲ
ದಿನಾಂಕ : 1-10-2024 ರಿಂದ 15-11-2024 ರ ವರೆಗೆ ಮಾತ್ರ.
BRANCH: MUDHOL.
NEXON
ಬ್ಯಾಂಕಿನ “ವಾಹನ ಸಾಲ ಮೇಳ” ದ ಯೋಜನೆಯಡಿ ಗ್ರಾಹಕರಿಗೆ ವಾಹನ ವಿತರಣೆ ಮಾಡಿದ ಸಂದರ್ಭ.

# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ

ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103


## ದುಡಿಯುವ ಬಂಡವಾಳ

(ರೂ. ಕೋಟಿಗಳಲ್ಲಿ)





## ನಿವ್ವಳ ಲಾಭ

(ರೂ. ಕೋಟಿಗಳಲ್ಲಿ)





## ಗುಂತಾವಣಿಗಳು

(ರೂ. ಕೋಟಿಗಳಲ್ಲಿ)





## ಠೇವಣಾತಿಗಳು

(ರೂ. ಕೋಟಿಗಳಲ್ಲಿ)




## ಸ್ವಂತ ಬಂಡವಾಳ

(ರೂ. ಕೋಟಿಗಳಲ್ಲಿ)




## ಸಾಲ ವಿತರಣೆ

(ರೂ. ಕೋಟಿಗಳಲ್ಲಿ)




## ಸಾಲ ಮುಂಗಡ ಬಾಕಿ

(ರೂ. ಕೋಟಿಗಳಲ್ಲಿ)



# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ಬಾಗಲಕೋಟೆ

ಸೆಕ್ಟರ ನಂ: 24, ನವನಗರ, ಬಾಗಲಕೋಟೆ-587 103

## ಸನ್ 2003 ರಿಂದ ಇಲ್ಲಿಯವರೆಗೆ ಬ್ಯಾಂಕು ಸಾಧಿಸಿದ ಪ್ರಗತಿಯ ಪಕ್ಷಿನೋಟ

(ರೂ: ಕೋಟಿಗಳಲ್ಲಿ)

| ನಂ | ವಿವರಗಳು | 31.03.03 | 31.03.05 | 31.03.07 | 31.03.09 | 31.03.11 | 31.03.13 | 31.03.15 | 31.03.17 | 31.03.18 | 31.03.19 | 31.03.20 | 31.03.21 | 31.03.22 | 31.03.23 | 31.03.24 | 31.03.25 |
|---|---|---|---|---|---|---|---|---|---|---|---|---|---|---|---|---|---|
| 1 | ಶೇರುಗಳು | 10.45 | 13.02 | 21.73 | 25.47 | 34.84 | 42.76 | 69.96 | 96.03 | 106.27 | 121.06 | 140.03 | 155.75 | 172.90 | 186.89 | 204.35 | 221.48 |
| 2 | ನಿಧಿಗಳು | 25.67 | 40.30 | 56.43 | 68.46 | 74.28 | 105.38 | 148.18 | 160.54 | 169.74 | 200.12 | 232.71 | 242.01 | 278.58 | 311.82 | 354.19 | 390.80 |
| | ಒಟ್ಟು (1+2) | **36.12** | **53.32** | **78.16** | **93.93** | **109.12** | **148.14** | 218.14 | **256.57** | **276.01** | **321.28** | **372.74** | **397.76** | **451.48** | **498.71** | **558.54** | **612.28** |
| 3 | ಠೇವುಗಳು | 227.22 | 255.85 | 371.04 | 464.46 | 606.24 | 913.59 | 1297.33 | 1675.95 | 1812.13 | 2145.61 | 2508.98 | 2858.85 | 3265.14 | 3521.68 | 3590.06 | 3857.04 |
| 4 | ಪಡೆದ ಸಾಲಗಳು | 56.04 | 66.36 | 126.61 | 317.99 | 250.32 | 427.26 | 644.50 | 786.98 | 705.67 | 663.28 | 884.79 | 1021.46 | 838.94 | 771.02 | 962.70 | 1178.82 |
| 5 | ದುಡಿಯುವ ಬಂಡವಾಳ | **341.18** | **385.81** | **592.21** | **897.58** | **988.56** | **1538.12** | **2207.35** | **2759.30** | **2897.17** | **3174.61** | **3834.55** | **4313.06** | **4594.90** | **4833.73** | **5167.53** | **5705.26** |
| 6 | ಸಾಲಗಳ ಬಾಕಿ | | | | | | | | | | | | | | | | |
| | ಅ) ಕೃಷಿ | 109.72 | 161.23 | 251.82 | 359.85 | 497.33 | 625.05 | 1017.17 | 1174.69 | 1116.56 | 1200.59 | 1276.32 | 1402.16 | 1455.06 | 1515.72 | 1529.09 | 1544.99 |
| | ಬ) ಕೃಷಿಯೇತರ | 112.21 | 95.83 | 82.00 | 131.00 | 138.25 | 293.32 | 384.95 | 741.03 | 883.56 | 1049.91 | 1330.57 | 1560.05 | 1706.44 | 1822.23 | 1962.85 | 2085.53 |
| | ಒಟ್ಟು (ಅ+ಬ) | **221.93** | **257.06** | **333.82** | **490.85** | **635.58** | 918.37 | **1402.12** | **1915.72** | **2000.12** | **2250.50** | **2606.89** | **2962.21** | **3161.50** | **3337.95** | **3491.94** | **3630.52** |
| 7 | ಗುಂತಾವಣಿಗಳು | 74.67 | 93.45 | 124.67 | 338.39 | 241.46 | 474.56 | 523.27 | 541.44 | 515.27 | 550.56 | 823.64 | 869.23 | 1026.70 | 1052.72 | 1107.28 | 1376.26 |
| 8 | ಸಾಲಗಳ ವಿತರಣೆ | | | | | | | | | | | | | | | | |
| | ಅ) ಕೃಷಿ | 123.26 | 151.68 | 226.53 | 430.27 | 509.86 | 681.16 | 1007.14 | 1080.23 | 935.95 | 1098.54 | 1190.81 | 1331.80 | 1392.26 | 1451.71 | 1420.24 | 1440.86 |
| | ಬ) ಕೃಷಿಯೇತರ | 128.99 | 134.43 | 145.62 | 257.97 | 360.90 | 522.48 | 552.48 | 842.72 | 857.99 | 750.03 | 863.06 | 1125.19 | 939.64 | 1356.51 | 1437.30 | 1412.76 |
| | ಒಟ್ಟು (ಅ+ಬ) | **252.55** | **286.11** | **372.15** | **688.24** | **870.75** | **1203.64** | **1559.62** | **1922.95** | **1793.94** | **1848.57** | **2053.87** | **2456.99** | **2331.90** | **2808.22** | **2857.54** | **2853.62** |
| 9 | ನಿವ್ವಳ ಲಾಭ | 1.86 | 4.16 | 4.19 | 6.30 | 3.12 | 4.24 | 16.15 | 4.94 | 4.26 | 4.94 | 5.10 | 5.30 | 6.65 | 11.28 | 12.17 | 7.61 |
| 10 | ಎನ್.ಪಿ.ಎ. ಪ್ರಮಾಣ | 3.15 | 8.87 | 6.92 | 5.95 | 2.98 | 2.77 | 1.42 | 3.66 | 4.09 | 2.74 | 4.16 | 5.83 | 7.83 | 5.49 | 4.62 | 6.98 |
| 11 | ವಸೂಲಿ ಪ್ರಮಾಣ | 87.52 | 89.18 | 60.02 | 97.14 | 99.11 | 98.68 | 99.82 | 91.24 | 99.36 | 99.05 | 95.09 | 94.32 | 92.29 | 90.93 | 91.47 | 90.40 |

# 71ನೇ ಅಖಿಲ ಭಾರತ ಸಹಕಾರ ಸಪ್ತಾಹ-2024
# ಬಾಗಲಕೋಟೆ







## THE BAGALKOTE D.C.C. BANK LTD.,
### BAGALKOTE